ಅಪ್ಪನಿಗೆ ಸಿಟ್ಟು ಬಂತು. 'ಸುಮ್ಮನ ಕುಂದ್ರತೀರೋ ಇಲ್ಲೋ, ಇಂಥ ಹಾಳು ಅಡವಿಯೊಳಗ ಅಲ್ಲಿ ಇಲ್ಲಿ ಹೋಗಬಾರದು.'

ಆದರೆ ಹುಡುಗರು 'ರಹಸ್ಯ ಮನೆ, ರಹಸ್ಯ ಮನೆ' ಅಂತ ಚೀರತೊಡಗಿದರು. ಹುಡುಗಿ ಅವ್ವನ ಕೊರಳಿಗೆ ಬಾಗಿ ತಮ್ಮ ಶಾಲಾ ರಜೆಯಲ್ಲಿ ಒಂದಾದರೂ ಇಂತಹದನ್ನು ತೋರಿಸಿಲ್ಲ, ಅಲ್ಲಿಗೆ ಹೋಗೋಣ ಎಂದು ಪೀಡಿಸತೊಡಗಿದಳು. ಹುಡುಗ ಅಪ್ಪನ ಸೀಟಿಗೆ ಒದೆಯತೊಡಗಿದ. ಅಪ್ಪನಿಗೆ ರೋಷ ಉಕ್ಕಿ ಒಂದು ಸೈಡಿಗೆ ಹೋಗಿ ಗಕ್ಕನೆ ಕಾರು ನಿಲ್ಲಿಸಿದ. 'ಹಂಗ್ಯಾಕ ಚೀರಲಿಕ್ಕೆ ಹತ್ತೀರಿ. ನಿಮ್ಮ ಸಲುವಾಗಿ ನನಗ ಸಾಕಾಗೇತಿ... ಕಾರು ಎಲ್ಲೂ ಹೋಗಂಗಿಲ್ಲ. ಇಲ್ಲೆ ನಿಂದರಿಸತೇನಿ.'

ಸಿಟ್ಟಿಗೆದ್ದ ಮಗನಿಗೆ ಅಜ್ಜಿ ಸಮಾಧಾನ ಮಾಡುವವಳಂತೆ ಹೇಳಿದಳು: 'ಅಲ್ಲೋ ಮಗನss, ಅದಕ್ಯಾಕ ಸಿಟ್ಟ ಮಾಡಿಕೊಳ್ತಿ. ಪಾಪ, ಹುಡುಗರು ಕೇಳಲಿಕ್ಕೆ ಹತ್ಯಾರ. ಅವರಿಗೂ ಹೊಸ ಹೊಸ ವಿಚಾರ ತಿಳಿತಾವು.'

'ಆಯ್ತು, ನಾ ಕರಕೊಂಡ ಹೋಗ್ತೀನಿ. ಆದರ ಇದು ಕಡೀ ಸಲ. ಇನ್ನ ಮ್ಯಾಲ ಅಲ್ಲಿ ಹೋಗೋಣು, ಇಲ್ಲಿ ಹೋಗೋಣು ಅಂತ ಹೇಳಿದ್ರ ಆಗಂಗಿಲ್ಲ, ನೋಡು.'

ಒಂದು ಕಿಲೋಮೀಟರ್ ಹಿಂದೆ ಒಂದು ಮಣ್ಣಿನ ರಸ್ತೆ ಹೋಯ್ತಲ್ಲ, ಅದೇ ದಾರಿ ಎಂದು ಮುದುಕಿ ಮಗನಿಗೆ ದಾರಿ ಹೇಳತೊಡಗಿದಳು. 'ಅಂಥ ಕಚ್ಚಾ ರಸ್ತೆಯೊಳಗ ಕಾರ್ ಹೆಂಗ ಹೊಡಿಬೇಕೋ' ಎನ್ನುತ್ತ ಮಗ ಕಾರು ತಿರುಗಿಸಿದ.

ಆ ಹಾಳು ರಸ್ತೆಯಲ್ಲಿ ಕಾರು ಹೊರಟಿತು. ಜಾನ್ ಅಪ್ಪನಿಗೆ ಹೇಳಿದ: 'ಅಪ್ಪಾ, ನನಗನಿಸೋ ಮಟ್ಟಿಗೆ ಆ ರಹಸ್ಯ ಪೆಟ್ಟಿಗೆ ಬಹುಶಃ ಅಡಿಗೆಮನೆಯ ಹತ್ತಿರದ ಮೂಲಿಯೊಳಗ ಇರಬೇಕು.'

'ಏಯ್, ಸುಮ್ಮನೆ ಕುಂಡ್ರೋ. ಅಲ್ಲಿಗೆ ಹೋದ ಮ್ಯಾಲ ಒಳಗ ಪಳಗ ಹೋಗಬಾರದು. ಒಳಗ ಯಾರ ಇರ್ತಾರೋ, ಯಾರಿಗ್ಗೊತ್ತು? ಹಾವು, ಹಲ್ಲಿ, ಹಂದಿ ವಾಸವಾಗಿರ್ತಾವು.'

'ಅಪ್ಪಾ, ನೀ ಏನೂ ಚಿಂತಿ ಮಾಡಬ್ಯಾಡ. ನೀವು ಅಲ್ಲಿರೋ ಜನರ ಜೊತೆ ಮಾತಾಡ್ತಾ ಇರೋ ಮುಂದ ನಾ ಹಿಂದುಗಡೆ ಹೋಗಿ ಕಿಟಕಿಯೊಳಗ ಎಲ್ಲ ಗಮನಿಸಿ ಬರ್ತೇನಿ. ಆಯ್ತಾ?'

ಕಚ್ಚಾ ರಸ್ತೆಗೆ ತಿರುವಿಕೊಂಡ ಕಾರು ಕೆಂಪು ದೂಳಿನಲ್ಲಿ ಹಾದು ಹೋಗತೊಡಗಿತು. ತಗ್ಗು, ದಿನ್ನೆ, ಒಮ್ಮೆಂದೊಮ್ಮೆಲೆ ಬರುವ ತಿರುವುಗಳು, ಬದಿಗೆ ನೋಡಿದರೆ ದೊಡ್ಡ ದೊಡ್ಡ ಹೊಂಡಗಳು. ಹಾಗೆಯೇ ಕಾರು ಅರ್ಧ ತಾಸು ಹೋಯಿತು. ಆ ರಸ್ತೆಯಲ್ಲಿ ಇದುವರೆಗೂ ಯಾವ ವಾಹನವೂ ಹೋದಂತಿರಲಿಲ್ಲ. ಮನುಷ್ಯರು ಕೂಡ ಹೋಗಿದ್ದಾರೋ, ಇಲ್ಲವೋ ಯಾರಿಗೆ ಗೊತ್ತು?

'ಈ ಕಡೆ ಯಾವ ಮನಿನೂ ಇಲ್ಲ, ಊರು ಇಲ್ಲ. ನಾ ಕಾರನ್ನ ರಿವರ್ಸ್ ತಗೋತೇನಿ.' ಅಪ್ಪ ಹೇಳಿದ.

'ಮಗಾ, ಇನ್ನೇನು ಬಾಳ ಹೊತ್ತು ಬೇಕಾಗಿಲ್ಲ. ಇಲ್ಲೇ ಸಮೀಪ ಐತಿ ಅಂತ ಅನಿಸಲಿಕ್ಕೆ ಹತ್ತೇತಿ...' ಮುದುಕಿ ಆ ಕಡೆ ಈ ಕಡೆ ನೋಡುತ್ತ ಹೇಳಿದಳು. ಹಾಗೆ ಹೇಳಿದ ಮರುಕ್ಷಣವೇ ಆಕೆಯ ತಲೆಯಲ್ಲಿ ವಿಚಾರವೊಂದು ಮಿಂಚಿನಂತೆ ಹರಿಯಿತು. ತಾನು ಹೇಳುತ್ತಿರುವ ಮನೆ ಇರುವುದು ಈ ಊರಿನಲ್ಲಿ ಅಲ್ಲವೇ ಅಲ್ಲ ಎಂದು ಅವಳಿಗೆ ಥಟ್ಟನೆ ಹೊಳೆಯಿತು. ಮಗ ತನ್ನನ್ನು ಎಷ್ಟು ಬೈಯ್ಯುವನೋ ಏನೋ! ಆ ಯೋಚನೆ ಬಂದಿದ್ದೇ ತಡ ಅವಳ ಮೈಯೆಲ್ಲ ಬೆವರಿತು. ಓಹ್! ದೇವರೆ, ತಾನು ಎಷ್ಟು ದೊಡ್ಡ ತಪ್ಪು ಮಾಡಿಬಿಟ್ಟೆ! ಆಕೆ ಅಯ್ಯೋ ಎನ್ನುತ್ತ ಒಮ್ಮಿಂದೊಮ್ಮೆಲೆ ಧೊಪ್ಪನೆ ಪುಟಿದು ಕೂತಳು. ಅವಳು ಹಾಗೆ ಜಿಗಿದು ಕುಳಿತ ರಭಸಕ್ಕೆ ಕಾರಿನಲ್ಲಿದ್ದ ಅವಳ ದೊಡ್ಡ ಬ್ಯಾಗ್ ಅವಳ ಜೊತೆಯೆ ಅಲುಗಾಡಿ ಅದರೊಳಗೆ ಇಷ್ಟು ಹೊತ್ತಿನತನಕ ತಣ್ಣಗೆ ಕುಳಿತಿದ್ದ ಬೆಕ್ಕು ಕಾರು ಬಿಡುತ್ತಿದ್ದ ಬೇಲಿಯ ಹೆಗಲ ಮೇಲೆ ಚಂಗನೆ ಜಿಗಿಯಿತು.